**ಕಡಿಮೆ ಮೌಲ್ಯದ ನಾಣ್ಯಗಳ ಸ್ವೀಕೃತಿ**

ಮೇ 30, 2003

ಈ ನಾಣ್ಯಗಳು ಚಲಾವಣೆಯಲ್ಲಿಲ್ಲ ಎಂಬ ವಾದದ ಮೇಲೆ, ಬ್ಯಾಂಕುಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಸಾರ್ವಜನಿಕರು 5, 10 ಮತ್ತು 20 ಪೈಸೆಯ **ಕಡಿಮೆ ಮೌಲ್ಯದ** ನಾಣ್ಯಗಳನ್ನು ಸಂದಾಯಗಳಿಗೆ ಸ್ವೀಕರಿಸುತ್ತಿಲ್ಲ ಎಂಬ ಪತ್ರಿಕೆಯ ನಿರ್ದಿಷ್ಟ ವಿಭಾಗಗಳಲ್ಲಿ ಕಂಡು ಬಂದ ವರದಿಗಳು ಭಾರತೀಯ ರಿಸರ್ವ್ ಬ್ಯಾಂಕಿನ ಗಮನಕ್ಕೆ ಬಂದಿದೆ ಮತ್ತು ದೂರುಗಳನ್ನು ಸಹಾ ಸ್ವೀಕರಿಸಲಾಗುತ್ತಿದೆ. ಈ ನಾಣ್ಯಗಳನ್ನು ಟಂಕಿಸುವ ಮತ್ತು ನೀಡುವುದನ್ನು ನಿಲ್ಲಿಸಿದ್ದಾಗ್ಯೂ, ಭಾರತ ಸರ್ಕಾರ ಅವುಗಳನ್ನು ಹಿಂತೆಗೆದುಕೊಂಡಿಲ್ಲ ಎಂದು ಸ್ಪಷ್ಟೀಕರಿಸಲಾಗಿದೆ. ಮುಂಚೆ ಹೊರಡಿಸಲಾದಂಥ ಎಲ್ಲಾ ನಾಣ್ಯಗಳು, ಚಲಾವಣೆಯಲ್ಲಿ ಮುಂದುವರಿಯುತ್ತವೆ. ಸಂಬಂಧಪಟ್ಟವರೆಲ್ಲರೂ ಸಂದಾಯಕ್ಕೆ ಮತ್ತು ವಿನಿಮಯಕ್ಕೆ ಸ್ವೀಕರಿಸಬೇಕು. ಈ ನಾಣ್ಯಗಳನ್ನು ಸ್ವೀಕರಿಸುವುದು ಬ್ಯಾಂಕುಗಳಿಗೆ ಕಡ್ಡಾಯವಾಗಿದೆ. ಹಾಗೂ ಆ ನಾಣ್ಯಗಳನ್ನು, ರಿಸರ್ವ್ ಬ್ಯಾಂಕಿನ ಹತ್ತಿರದ ಕಚೇರಿಯಿಂದ ಅವರು ವಿನಿಮಯ ಮಾಡಿಕೊಳ್ಳಬಹುದು.

ಪಿ.ವಿ. ಸದಾನಂದನ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/1223